In this regard review is conducted regularly and necessary security measures are being taken.

ಆ) ಸಂಬಂಧಪಟ್ಟ ಶಾಸಕರ/ ಚುನಾಯಿತ ಪ್ರತಿನಿಧಿಗಳ ಭದ್ರತೆಯ ಹಿತದೃಷ್ಟಿಯಿಂದ ವಿವರಗಳನ್ನು ಸಂಬಂಧಪಟ್ಟ ಶಾಸಕರಿಗೆ ತಿಳಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

In the interest of their security, the local police officials have been instructed to appraise the concerned legislators.

459 ಶ್ರೀ ಬಚ್ಚೇಗೌಡ ಕೆ.ಪಿ.(ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ ಉದ್ದೇಶಿತ ಉದ್ದ (ಕಿ.ಮೀ.ಗಳಲ್ಲಿ) ಹಾಗೂ ಅಂದಾಜು ವೆಚ್ಚವೆಷ್ಟು (ಯೋಜನೆಯ ಫಂಡಿಂಗ್ ಸ್ಟ್ರಕ್ಚರ್ ಬಗ್ಗೆ ಮಾಹಿತಿ ನೀಡುವುದು);

ಆ) ಇಲ್ಲಿಯವರೆಗಿನ ಈ ಯೋಜನೆಯ ಗುರಿ ಮತ್ತು ಸಾಧನೆಗಳೇನು (ಭೌತಿಕ ಮತ್ತು ಆರ್ಥಿಕ ಅಂಕಿ ಅಂಶಗಳ ಬಗ್ಗೆ ಮಾಹಿತಿ ನೀಡುವುದು)?

ಇ) ಈ ಯೋಜನೆಯನ್ನು ಪೂರೈಸುವ ಬಗೆಗಿನ ಮೂಲತಃ ಕಾಲಮಿತಿ ಹಾಗೂ ವಾಸ್ತವ ಕಾಲಮಿತಿಗಳೇನು (ಮಾಹಿತಿ ನೀಡುವುದು);

ಈ) ಮೆಟ್ರೋ ರೈಲಿಗಿಂತ ಮಾನೋರೈಲು ಯೋಜನೆ ಆರ್ಥಿಕ ದೃಷ್ಟಿಯಿಂದ ಅನುಕೂಲಕರ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ಯೋಜನೆಯ ಉದ್ದೇಶಿತ ಉದ್ದ 42.6 ಕಿ.ಮೀ. ಅಂದಾಜು ವೆಚ್ಚ ರೂ. 8158 ಕೋಟಿಗಳು.

ಕ್ರ ಸಂ.		ಭಾರತ ಸರ್ಕಾರ	ಕರ್ನಾಟಕ ಸರ್ಕಾರ	ಒಟ್ಟು
1	ಸಾಮ್ಯ ಷೇರು	15%	15%	30%
2	ಅಧೀನ ಸಾಲ	10%	15%	25%
3	ಹಣಕಾಸು ಸಂಸ್ಥೆಗಳಿಂದ ಸಾಲ	–	–	45%
	ಒಟ್ಟು	–	–	**100%**

ಆ)

ಮಾರ್ಗ		ಪೂರ್ಣಗೊಳ್ಳುವ ದಿನಾಂಕ
ಬೈಯ್ಯಪ್ಪನಹಳ್ಳಿ–ಕ್ರಿಕೆಟ್ ಸ್ಟೇಡಿಯಂ	–	ಡಿಸೆಂಬರ್–2010
ಯಶವಂತಪುರ–ಸ್ವಸ್ತಿಕ್	–	ಜೂನ್–2011
ಯು.ಜಿ.ಸೆಕ್ಷನ್	–	ಜೂನ್–2012
ಸಿಟಿ ಸ್ಟೇಷನ್–ಮೈಸೂರು	–	ಆಗಸ್ಟ್–2012
ಸಿಟಿ ಮಾರ್ಕೆಟ್–ಆರ್.ವಿ.ರಸ್ತೆ	–	ಸೆಪ್ಟೆಂಬರ್–2012
ಆರ್.ವಿ.ರಸ್ತೆ ಟರ್ಮಿನಲ್ – ಪುಟ್ಟೇನಹಳ್ಳಿ ಕ್ರಾಸ್	–	ಸೆಪ್ಟೆಂಬರ್–2012
ಯಶವಂತಪುರ–ಪೀಣ್ಯ	–	ಜೂನ್–2011
ಪೀಣ್ಯ–ಹೆಸರಘಟ್ಟ ಕ್ರಾಸ್	–	ಸೆಪ್ಟೆಂಬರ್–2012

ಒಟ್ಟು 154 ಮೈಲಿಗಲ್ಲುಗಳಲ್ಲಿ 82 ಮೈಲಿ ಗಲ್ಲುಗಳನ್ನು ಮುಟ್ಟಲಾಗಿದೆ ಮತ್ತು 69 ಮೈಲಿಗಲ್ಲುಗಳು ಪ್ರಗತಿಯಲ್ಲಿವೆ.

ಆರ್ಥಿಕ ಪ್ರಗತಿ: 1419.55 ಕೋಟಿಗಳು, ಜೂನ್ 30, 2009ರವರೆಗೆ.

ಇ) ಮೂಲತಃ ಕಾಲಮಿತಿ–ಡಿಸೆಂಬರ್–2011

ವಾಸ್ತವ ಕಾಲಮಿತಿ–ಸೆಪ್ಟೆಂಬರ್–2012.

ಈ) ಪೀಕ್ ಅವರ್ ಪೀಕ್ ಡೈರೆಕ್ಷನ್ (PHPDT) 10,000ಕ್ಕಿಂತ ಹೆಚ್ಚು ಇರುವ ಸಂದರ್ಭದಲ್ಲಿ ಮಾನೋ ರೈಲು ಮೆಟ್ರೋ ರೈಲ್‌ಗಿಂತ ಆರ್ಥಿಕ ದೃಷ್ಟಿಯಿಂದ ಅನುಕೂಲಕರವಲ್ಲ.

ಉ) ಉದ್ಭವಿಸುವುದಿಲ್ಲ.

450 ಶ್ರೀ ಕುಮಾರಸ್ವಾಮಿ ಹೆಚ್.ಕೆ. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿದ ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿರುವ ಪ್ರಕರಣಗಳೆಷ್ಟು ಹಾಗೂ ನ್ಯಾಯಾಲಯದಲ್ಲಿರುವ ಪ್ರಕರಣಗಳೆಷ್ಟು (ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಕಬಳಿಸಿರುವವರ ಪೂರ್ಣ ಹೆಸರು ಮತ್ತು ವಿಳಾಸಗಳನ್ನು ನೀಡುವುದು);